Regd. No. M. 1299 ॥ ಸತ್ಯಾನ್ನಾಸ್ತಿ ಪರೋಧರ್ಮಃ ॥ 11684 ಬಿಡಿ ಪ್ರತಿ ೩ ಪೈ.

ಸತ್ಯವಾದಿ

ಆಫೀಸ್—ಚಾಮರಾಜ ಅಗ್ರಹಾರ, ಮೈಸೂರು ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವುದು ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ 1—8—0

ಸಂಪುಟ ೭] ಮೈಸೂರು, ಮಂಗಳವಾರ, ೧೮ ನೆ ಆಗಸ್ಟ್ ೧೯೨೫. [ಸಂಚಿಕೆ ೩೨

ಸುಗಂಧ ದ್ರವ್ಯಗಳು

ನಮ್ಮಲ್ಲಿ ಎಲ್ಲಾ ತರಹದ ಊದುಬತ್ತಿಗಳೂ, ಗಂಧದಬಿಲ್ಲೆಗಳೂ, ಪನ್ನೀರು, ರಾಯಲ್ ಸುಗಂಧಿ ಎಲ್ಲಾ ತರಹ ಮುರಬ್ಬಾಗಳು, ಎಲ್ಲಾ ತರಹದ ಷರಬತ್ತುಗಳು, ಇವುಗಳೆಲ್ಲಾ ದೊರೆಯುತ್ತವೆ. ಖರೀದಿ ಕಡಮೆಯಾಗಿಯೂ, ಪದಾರ್ಥಗಳು ನಂಬಿಕೆಯಾಗಿಯೂ ಇರುತ್ತವೆ. ಅಪೇಕ್ಷಿಸುವವರು ತರಿಸಿಕೊಳ್ಳಬೇಕಾಗಿ ಪ್ರಾರ್ಥನೆ. [22-5]

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿಗಳು, ಮೈಸೂರು

ಇಂಡಿಯಾ ಪ್ರಾವಿಡೆಂಟ್ ಕಂಪೆನಿ, ಲಿಮಿಟೆಡ್ 8-5

ಸುಪ್ರಸಿದ್ಧವಾದ ಈ ಕಂಪೆನಿಯು ಕಲ್ಕತ್ತಾದಲ್ಲಿ 1910 ರಲ್ಲಿ ಸ್ಥಾಪಿತವಾದುದು. ಕಂಪೆನಿಯ ಭದ್ರತೆಗೆ ಸರ್ಕಾರದಲ್ಲಿ ಹಣ ಡಿಪಾಜಿಟ್‌ಮಾಡಿರುತ್ತೆ. ತಿಂಗಳಿಗೆ 1 ರೂಪಾಯಿಯ 8 ಆಣೆ ಪ್ರಕಾರ ರೂ 500, ರೂ 250 ಗಳಿಗೆ ಪುರುಷರಿಗೂ ಸ್ತ್ರೀಯರಿಗೂ, ವೈದ್ಯಪರೀಕ್ಷೆ ಇಲ್ಲದೆ, ವಯಸ್ಸಿನ ಪ್ರತಿಬಂಧಕವಿಲ್ಲದೆ, ಜೀವವಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ಏಜೆಂಸಿಯ ಷರತ್ತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ

927 ಚಾಮರಾಜ ಪುರಂ, ಮೈಸೂರು.

MYSORE GOVERNMENT LOAN BONDS

&

Shares of Companies

BOUGHT & SOLD

For particulars apply to:—

THE SEMAH ELISHA COMPANY

MYSORE.

ಮೈಸೂರು ಸರ್ಕಾರಿ ಸಾಲದ ಪತ್ರ

ಮತ್ತು ಕಂಪನಿ ಷೇರುಗಳನ್ನು

ಕೊಂಡುಕೊಳ್ಳುತ್ತೇವೆ

ಮತ್ತು

ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪೆನಿ ಮೈಸೂರು.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದುಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೭೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಚ್ಚಿನ ಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬಿಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,

ಸಂತೇಪೇಟೆ, ಮೈಸೂರು,

Rosehead Necklaces

ಮುತ್ತಿನ ಕಂಠೀಹಾರಗಳು

ಈ ಮುತ್ತುಗಳು ಚೆನ್ನಾಗಿ ಹೊಳಪುಳ್ಳವುಗಳಾಗಿವೆ. ನೋಡಲು ಅತಿ ಸುಂದರವಾಗಿವೆ. ಇವನ್ನು ನಿಜವಾದ ಅಥವ ಇಮಿಟೇಷನ್ ಮುತ್ತುಗಳೊಡನೆ ಹೋಲಿಸಿ ನೋಡಿ, ಒಳ್ಳೇ ಮುತ್ತುಗಳಿಗಿಂತ ಕೀಳೆಂದು ತೋರಿದರೂ, ಇಮಿಟೇಷನ್ ಮುತ್ತುಗಳಿಗಿಂತ ಉತ್ತಮವಲ್ಲವೆಂದು ತೋರಿದರೂ ೮ ದಿನಗಳೊಳಗೆ ವಾಪ್ಸು ಮಾಡಿದಲ್ಲಿ ನಿಮ್ಮ ಹಣ ವಾಪ್ಸುಮಾಡಲಾಗುವುದು ಚಿನ್ನದ ಕೊಂಡಿಗಳಿಂದ ಸೇರಿಸಿರುವ ೧೮ ಅಂಗುಲದ ಈಹಾರವನ್ನು ವಿ. ಪಿ. ಮೂಲ್ಕ ೮ ರೂಪಾಯಿಗಳಿಗೆ ಸರವನ್ನಿಡಲು ಒಂದು ಅಂದವಾದ ಪೆಟ್ಟಿಗೆಯನ್ನು ಉಚಿತವಾಗಿ ಕೊಡಲಾಗುತ್ತೆ. ಕೆಲವು ಮಾತ್ರ ಮಿಕ್ಕಿವೆ ಅನೇಕ ಮಾದರಿಯಲ್ಲಿಯೂ ವಿವಿಧ ಬಣ್ಣದ್ದಾಗಲಿ, ಸುವಾಸಿದವಾಗಿಯೂ ಇದೆ. ಕಗ್ಗತ್ತಲೆಯಲ್ಲಿಯೂ ಹೊಳೆಯುತ್ತದೆ. ಒಡವೆ ಜೊತೆಗೆ ಒಂದು ದೀಪವೂ ಮೊದಲು ಒಂದು ವಾರದಲ್ಲೀ ೨೨೦೦ ಕ್ಕೆ ಮೇಲ್ಪಟ್ಟು ಖರ್ಚಾಗಿದೆ. 14-7

'ಅಪ್ಪೊ' ಅಲ್ಯೂಮಿನಿಯಂ ಸೋಪ'

ಯೂರೋಪಿನ ಒಂದುದೊಡ್ಡ ಕಾರ್ಖಾನೆಯಲ್ಲಿ ತಯಾರಾದ ಈಸಾಬೂನುಗಳು ಕೊಳೆಯಾದ ಅಲೂಮಿನಂ ಪಾತ್ರೆಗಳನ್ನು ತೊಳೆದು ಹೊಳೆಯುವಂತೆ ಮಾಡುತ್ತದೆ. ಒಂದು ಪೆಟ್ಟಿಗೆಯು ೧೦೦ ಪಾತ್ರೆಗಳನ್ನು ತೊಳೆಯಲು ಬರುತ್ತೆ. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಉಪಯೋಗಿಸಲ್ಪಡುತ್ತಿದೆ.

ಕ್ರಯ ದೊಡ್ಡ ಪೆಟ್ಟಿಗೆ ೧ಕ್ಕೆ ರೂ ೧—೪—೦
ಚಿಕ್ಕ ಪೆಟ್ಟಿಗೆ ೧ಕ್ಕೆ ರೂ ೦—೧೦—೦

ಸೋಪಿಗೆ ಆರ್ಡರ್ ಕೊಡುವವರು ಪೂರಾ ಹಣವನ್ನು ಮುಂಗಡವಾಗಿ ರವಾನಿಸಬೇಕು.

Agencia Mercantil-y-Maritima,
INTERNATIONAL BUILDINGS,
LUDHIANA (Punjab)

---

past, present and future Dictator

The wonderful mechanism of man here explained. Your. future once more, why that beginning, wherefore this rise and fall the what of the next DO CONSULT. This astrologer determines all about your life before the curtain drops. The all is the research study of that beginning, the inductive and unique advisory of the rise and fall in current life, the what in future. This is combined in the knowledge—mature of the birth-time, the Zodaic sign commanding the planets, the constellation of star that lights the right way of life's attainment. Opportunity solicited with a hearty offer of trial.- Beware others of this proclamation are little read in the agreement of life with its visible and invisible imbeded directors. Man in his pride of presumption has neglected to maintain his own life concurrently with theinvi sible and visible agencies, hence, the frustrations of his attempts to success. Success is only gained by man, the man that knows equally of the visible impediments which he wards easily and the invisible which he tries to attain but neglects. Fail not, neglect not and attain your wishes as the free-will man. The win's influences are imbeded in time The doctor advises only to the outer agreement but the honest way is lacking to explain the why of the failure. The astrologer alone can explain this in its detail and win you the life's battle as easy as the doctor's medicine, which proclaims to releve. This foreword might appeal and lead you to our Astralogical Bureau, where your all-care is explained to heart's content. The heart is the seat of divinity, the divine-wisdom-ice is broken to your swallowing adversities by bits. Apply for the yearly, monthly, weekly and daily predictions; particulars on enquiry

Bidare Nanjundasastry and Brother
Astrologers, PARIMALA VILAS *Mysore*

The Champion Metropolitan College of Commerce, Economics, Banking, etc.

YELWAL ROAD, MYSORE.

1925--26 Prospectus can be had free at the College or by post on receipt of ½ anna stamp to cover postage (5-6)

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ 18-8

ಮೈಸೂರು ವಾಣೀವಿಲಾಸ ಮೊಹಲ್ಲಾದಲ್ಲಿ ಕೆಲವು ಸೈಟುಗಳು ಖರೀದಿಗೆ ಇರುತ್ತವೆ. ತಪಶೀಲು ತಿಳಿಯಬೇಕಾದಲ್ಲಿ ಆಫೀಸು ನೋಟೀಸ್ ಬೋರ್ಡ್ ಮೇಲೆ ಚಿಕಟಾಯ್ಸಿರುವ ಇಸ್ತೀಹಾರ್ ನಾಮೆಯನ್ನು ನೋಡಬಹುದು ; ಅಥವಾ ಟ್ರಸ್ಟ್‌ಬೋರ್ಡ್ ಛೇರ್ಮನ್ ರವರಿಗೆ ಬರೆದುಕೊಳ್ಳಬಹುದು.

ಮೈಸೂರು } **N. Madhava Rao**
ತಾ|| 15-8-1925 } *Chairman*

“ ಸತ್ಯವಾದಿ ”

೧೮ ನೆ ಆಗಸ್ಟ್ ೧೯೨೫

ಮಾರಿಷಸ್ಸಿನಲ್ಲಿ ಹಿಂದೂ ಜನರ ಸ್ಥಿತಿ.

ಮಾರಿಷಸ್ ದ್ವೀಪದಲ್ಲಿರತಕ್ಕ ಭಾರತೀಯರ ಸ್ಥಿತಿಗತಿ ನ್ನು ವಿಚಾರಮಾಡುವುದಕ್ಕಾಗಿ ನಿಯಮಿತರಾಗಿದ್ದ ಕ್ವಾರ್ ಮಹಾರಾಜ್‌ಸಿಂಗ್‌ರವರು ತಮ್ಮ ಅಭಿಪ್ರಾ ವನ್ನು ಈಗ ಪ್ರಕಟಿಸಿರುತ್ತಾರೆ. ಜಾಣರಲ್ಲದ ಕೆಲಸ ರರನ್ನು ಮಾರಿಷಸ್ಸಿಗೆ ಕಳುಹಿಸಬೇಕಾದ ಆವಶ್ಯಕವಿಲ್ಲ ು ವಾಂಛನೀಯವೂ ಅಲ್ಲ ಎಂದು ಖಂಡಿತವಾಗಿ ತಿಳಿ ತ್ತಲಿದ್ದಾರೆ.

ಕೆಲಸದವರ ಸ್ಥಿತಿಯು ಅಲ್ಲಿ ಸರಿಯಾಗಿಲ್ಲವೆಂಬದಾಗಿ ರ ರಿಪೋರ್ಟಿನಿಂದ ತಿಳಿದುಬರುತ್ತಲಿದೆ. ಎಸ್ಟೇಟ್ ಲಿಯುವರಿಗಾಗಿ ಒಳ್ಳೆಯ ಮನೆಗಳನ್ನು ಕಟ್ಟಿಸಬೇಕೆಂ ದಾಗಿಯೂ ಎಸ್ಟೇಟು ಆಸ್ಪತ್ರೆಗಳಲ್ಲಿ ಭಾರತೀಯ ವೈ ರನ್ನು ಹೆಚ್ಚಾಗಿ ನಿಯಮಿಸಬೇಕೆಂಬುದಾಗಿಯೂ ಫ್ಯಾ ಗಳಲ್ಲಿ ಬಾಲಕರನ್ನು ಕೆಲಸಕ್ಕಾಗಿ ನಿಯಮಿಸಿಕೊಳ್ಳ ಡವೆಂಬುದಾಗಿಯೂ ಕೆಲಸದವರಿಗೆ ನಷ್ಟಪರಿಹಾರಾದಿ ನ್ನು ಕೊಡತಕ್ಕ ಕಾನೂನು ಏರ್ಪಾಡಾಗಬೇಕೆಂಬು ಗಿಯೂ ಇವೇ ಮುಂತಾದ ಸಂಗತಿಗಳನ್ನು ಇವರು ಚಿಸಿರುತ್ತಾರೆ. ಆವ ದೇಶದಲ್ಲಿಯೂ ಭಾರತೀಯ ಕೆ ಗಾರರ ದುಸ್ಥಿತಿಯು ದಿನೇದಿನೇ ಪ್ರಬಲವಾಗುತ್ತಿದೆ. ರ ಪಕ್ಷವನ್ನು ವಹಿಸತಕ್ಕವರೇ ಕಂಡುಬರುವುದಿಲ್ಲ. ರ ಪ್ರದೇಶಗಳಲ್ಲಿರತಕ್ಕ ಸಹೋದರರನ್ನು ಕಾಪಾಡಿಕೊ ಕ್ಕ ಶಕ್ತಿಯು ಭಾರತೀಯರಿಗಿರುವುದಿಲ್ಲ. ಹೀಗಿರು ಕೆಲಸಗಾರರು ಈ ದೇಶವನ್ನು ಬಿಟ್ಟು ಹೋಗದಿರು ೇ ಉತ್ತಮವಾದುದು. ಕೈಗಾರಿಕೆ ಕಸಬುಗಳಿಗೆ ಸರಿ ದ ಪ್ರೋತ್ಸಾಹವಿರುತ್ತಿದ್ದಲ್ಲಿ ಈ ಹಿಂದೂ ದೇಶವೇ ಮಂದಿಯನ್ನಾದರೂ ಪೋಷಿಸಬಲ್ಲದು.

ದೇಶಬಂಧು ಚಿತ್ತರಂಜನ ದಾಸರ ಪ್ರಶಂಸೆ.

(ಒಬ್ಬ ಅಮೆರಿಕಾ ದೇಶೀಯನಿಂದ)

‘ ಐದು ಸಂವತ್ಸರಗಳ ಕೆಳಗೆ ದಾಸರು ಕಲ್ಕತ್ತಾ ಯವಾದಿಗಳಲ್ಲಿ (ವಕೀಲರಲ್ಲಿ) ಪ್ರಧಾನಸ್ಥಾನವನ್ನು ದ್ದರು. ಈ ವೃತ್ತಿಯಿಂದ ಅವರಿಗೆ ಸಾಲಿಗೆ ೫೦ ರೂಪಾಯಿಗಳು ಆದಾಯವಾಗುತಿದ್ದಿತು. ಕಲ್ಕ ಲ್ಲಿ ಒಂದು ದಿವ್ಯ ಭವನವನ್ನು ಕಟ್ಟಿಸಿ ಅದರಲ್ಲಿ ಸುತಿದ್ದರು. ಕಾಲಕ್ರಮದಲ್ಲಿ ಮಹಾತ್ಮರ ಉಪದೇ ಇವರನ್ನು ವಶಮಾಡಿಕೊಂಡಿತು. ನಾಲ್ಕು ವರ್ಷ ನ ಒಂದು ದಾವಾವನ್ನೂ ಅವರು ಹಿಡಿಯದೆ ರರು.

ಎಂಟು ಲಕ್ಷ ರೂಪಾಯಿ ಬೆಲೆಯುಳ್ಳ ತಮ್ಮ ಆ ನ್ನೆಲ್ಲಾ ದೇಶಕ್ಕೆ ಧಾರೆ ಎರೆದು ಮಾತೃಭೂಮಿ ೀವೆಯೇ ಇಹಪರದಲ್ಲಿ ಸೌಖ್ಯಕ್ಕೆ ಕಾರಣಭೂತ ತಿಳಿದು ಇಂಡಿಯಾ ದೇಶವನ್ನು ಸ್ವತಂತ್ರರಾಜ್ಯ ಗಿಮಾಡಲು, ಕಂಕಣಬದ್ಧರಾಗಿ ನಿಂತು ತಾವು ುವವರೆಗೂ ಅಹೋರಾತ್ರಿಯಲ್ಲಿಯೂ ಕೆಲಸ ತಮ್ಮ ಜನ್ಮವನ್ನು ಸಾರ್ಥಕಗೊಳಿಸಿಕೊಂಡಿರು ಸ್ತ್ರೀಯರಿಗೆ ವಿಶ್ವವಿದ್ಯಾನಿಲಯವು ಏರ್ಪಾಡಾಗು ಪೂರ್ವ ಧರ್ಮಕಾರ್ಯಗಳನ್ನೂ ಧರ್ಮಕರ್ಮಗ ಳನ್ನೂ ಮಾಡಬೇಕೆಂದು ಅಪೇಕ್ಷಿಸಿದರು. ನಂತರ ತಾವಿಲ್ಲದೆ ಒಬ್ಬ ಮಿತ್ರನು ಕೊಟ್ಟ ಒಂದು ಸಣ್ಣಮನೆಯಲ್ಲಿ ವಾಸಿಸುತ್ತಿದ್ದು ಕಾಲವಾದರು. ಅವರು ಸಾಯುವಾಗ್ಗೆ ಕಲ್ಕತ್ತಾ ನಗರಪಾಲಕಸಂಘಾಧ್ಯಕ್ಷರಾಗಿಯೂ ಭಾರತ ಸ್ವರಾಜ್ಯಸಂಘಾಧ್ಯಕ್ಷರಾಗಿಯೂ ಇದ್ದರು.

“ ಅಸಹಕಾರದ ಕಾಠಿಣ್ಯವನ್ನು ಸಡಲಿಸಬೇಕೆಂದು ಎರಡು ವರ್ಷಗಳ ಕೆಳಗೆ ದಾಸರವರೇ ಮಹಾತ್ಮರನ್ನು ಪ್ರೋತ್ಸಾಹಮಾಡಿದರು. ಶಾಸನ ಸಭೆಗೆ ಹೋಗಿ ಒಳಗಿನಿಂದ ಪ್ರತಿಘಟನೆಯನ್ನು ಮಾಡಿದಂಥಾ ಐರ್ಲೆಂಡಿನ ಪ್ಯಾರ್ನೆಲ್‌ರವರ ಪದ್ಧತಿಯನ್ನೇ ದಾಸರು ಅವಲಂಬಿಸಿದರು. ಆದುದರಿಂದಲೇ ವಂಗ–ಮಧ್ಯರಾಷ್ಟ್ರಗಳಲ್ಲಿ ದ್ವಂದ್ವಪರಿಪಾಲಕವು ವಿಫಲವಾಯಿತು. ವಂಗಶಾಸನಸಭೆಯಲ್ಲಿ ಹೆಚ್ಚುಮಂದಿ ದಾಸರನ್ನು ಅನುಸರಿಸಿದರು. ಮಂತ್ರಿಗಳ ಸಂಬಳವನ್ನು ನಿರಾಕರಿಸಿದರು.

“ ಕಳೆದ ಮಾರ್ಚಿ ತಿಂಗಳಲ್ಲಿ ಮಂತ್ರಿಗಳ ಸಂಬಳದ ಬಿಲ್ಲನ್ನು ಕುರಿತು ವಂಗರಾಷ್ಟ್ರಶಾಸನ ಸಭೆಯಲ್ಲಿ ಓಟುಗಳನ್ನು ತೆಗೆದುಕೊಂಡಾಗ್ಯೆ ದಾಸರವರ ಹೇಳಿಕೆಯೂ ಪ್ರಕಾಶಗೊಂಡವು ದಾಸರ ಪಕ್ಷದವರಲ್ಲೇ ಕೆಲವರು ಸಂಶಯಗ್ರಸ್ತರಾಗಿದ್ದರು. ದಾಸರವರಿಗೆ ಅನಾರೋಗ್ಯವಾಗಿದ್ದಿತು. ವೈದ್ಯರ ಮಾತನ್ನೆಣಿಸದೆ ಅವರು ಶಾಸನ ಸಭೆಗೆ ಹೊರಡಲುದ್ಯುಕ್ತರಾದರು. ಆದರೆ ನಡೆಯಲು ತ್ರಾಣವಿರಲಿಲ್ಲವಾಗಿ ಡೋಲಿಯಲ್ಲಿ ಅವರನ್ನು ಸಭೆಗೆ ಕೊಂಡೊಯ್ದರು. ಡೋಲಿ ಹೊತ್ತವರನ್ನು ಸಹ ಒಳಕ್ಕೆ ಬಿಡುವುದಿಲ್ಲವೆಂದು ಬ್ರಿಟಿಷ್ ಅಧಿಕಾರಿಗಳು ತಿಳಿಸಿದರು. ಆ ಅಧಿಕಾರಿಗಳು ವಿಶೇಷ ಭೀತಿಯಿಂದಿದ್ದುದರಿಂದ ಶಾಸನಸಭ್ಯರಾದ ಸ್ವರಾಜ್ಯವಾದಿಗಳೇ ದಾಸರವರನ್ನು ಹೊತ್ತುಕೊಂಡೊಯ್ದರು. ಆದರಿಂದ ದಾಸರ ಪಕ್ಷಕ್ಕೆ ಧೈರ್ಯವುಂಟಾಗಿ ಬಿಲ್ಲಿಗೆ ವ್ಯತಿರಿಕ್ತವಾಗಿ ಓಟನ್ನು ಕೊಟ್ಟು ಅದನ್ನು ಮುಳೆಗೆ ಕೂರಿಸಿದರು.

“ ದಾಸರವರೂ ಸಹ ನೂಲು ತೆಗೆಯುತ್ತ ಖದ್ದರನ್ನುಡುತ್ತಲೇ ಇದ್ದರು. ರಾಜನೀತಿಯಲ್ಲಿ ದಾಸರವರಿಗೆ ಮಹಾತ್ಮರು ಕೂಡ ಕೀಳರವೆಂದೇ ಹೇಳಬೇಕಾಗಿರುವುದು. ಮೇ ತಿಂಗಳಲ್ಲಿ ನಡೆದ ವಂಗರಾಷ್ಟ್ರಸಭೆಯಲ್ಲಿ ದಾಸರವರುಪನ್ಯಾಸದಲ್ಲಿ “ ದೊರೆತನದವರು ಕೊಂಚ ಸ್ವಾತಂತ್ರ್ಯವನ್ನು ದೇಶೀಯರಿಗೆ ಕೊಟ್ಟಲ್ಲಿ ದೇಶೀಯರು ಮುಖ್ಯವಾಗಿ ಸಹಾಯವನ್ನು ಮಾಡುವರು. ದೊರೆತನದವರು ಸದ್ಭಾವನೆಯನ್ನು ತೋರಿಸಿ ಸ್ವರಾಜ್ಯವನ್ನು ಶೀಘ್ರವಾಗಿ ಕೊಡಲು ಏರ್ಪಾಡುಮಾಡಬೇಕು ” ಎಂದು ನುಡಿದರು. ಆಂಗ್ಲೇಯರು ಹಾಗೆ ಮಾಡುವರೇ ?

“ ರಾಜಕೀಯಾಧಿಕಾರವನ್ನು ಪಡೆಯಲು ಪಾಶ್ಚಾತ್ಯರು ಭೌತಿಕ ಭೋಗವನ್ನು ಪರಿತ್ಯಜಿಸಲಂಗೀಕರಿಸರು. ಮಹಾತ್ಮರಂತೆಯೇ ದಾಸರವರಿಗೂ ಸಹ ಸ್ವಾರ್ಥಪರತೆ ಏನೂ ಇಲ್ಲವು. ಆದುವರಿಂದ ಪ್ರಾಗ್ದೇಶ ನಾಯಕರ ವಾಕ್ಯಗಳು ಪ್ರಾಚೀನಕಾಲದ ಪ್ರವಕ್ತರ ಆದೇಶಗಳಂತೆ ಪ್ರಜೆಗಳನ್ನು ಸುಲಭವಾಗಿ ವಶಮಾಡಿಕೊಳ್ಳುವುಗಳಾಗಿವೆ. ಪಾಶ್ಚಾತ್ಯದೇಶೀಯರು ತಮ್ಮ ಮುಖಂಡರ ವಾಕ್ಯಗಳಿಗೆ ಹಾಗೆ ವಶರಾಗುವರೇ ?

“ ಸತ್ಯಕ್ಕಾಗಿಯೂ ನ್ಯಾಯಕ್ಕಾಗಿಯೂ ಸರ್ವಸಮರ್ಪಣೆಯನ್ನು ಮಾಡಲು ನೀವು ಸಂಸಿದ್ಧರಾದರೆ ಅದರಿಂದ ಉಂಟಾಗುವ ಲಾಭವನ್ನು ನಿಮ್ಮ ಪುತ್ರಪೌತ್ರಾದಿಗಳು ಅನುಭವಿಸುವರು ” ಎಂದು ದಾಸರವರು ಭಾರತೀಯರಿಗೆ ಬೋಧಿಸಿದರು. ಅಂತಹ ಆದೇಶವನ್ನು ಪಾಶ್ಚಾತ್ಯರಾರ್ಯಾರೂ ಮಾಡಿದುದಲ್ಲಿ ಪಾಶ್ಚಾತ್ಯರಾದ ನಾವು ಅದನ್ನು ಆದರಿಸುತ್ತೇವೆಯೋ ?

“ ದಾಸರವರು ಅಪೇಕ್ಷಿಸಿದಂತೆ ತ್ಯಾಗಮಾಡುವುದಕ್ಕೆ ಭಾರತೀಯರು ಸಂಸಿದ್ಧರಾದಪಕ್ಷಕ್ಕೆ ಭಾರತ ದೇಶವು ಪ್ರಪಂಚಕ್ಕೆ ಶ್ರೇಷ್ಠವಾದ ನಾಗರಿಕತೆಯನ್ನು ಪ್ರದರ್ಶಿಸಿದಂತಾಗುವುದಲ್ಲದೆ ಪಾಶ್ಚಾತ್ಯ ನಾಗರಿಕತೆಯು ಕ್ಷೀಣಿಸುತ್ತಿದೆಯೆಂದು ನಾವು ನಗಲು ಅವಸರವಿರದು ”

(ನ್ಯೂಯಾರ್ಕ್ ನೇಷನ್)

ವೃತ್ತಾಂತ ಸಂಗ್ರಹ

—ಗುಂಟೂರು ಕೋರ್ಟಿನಲ್ಲಿ ಬ್ರಾಹ್ಮಣರಮೇಲೆ ಬ್ರಾಹ್ಮಣೇತರರು ತಂದಿದ್ದ ಒಂದು ಕ್ರಿಮಿನಲ್ ಮೊಕದ್ದಮೆಯನ್ನು ಅಲ್ಲಿಯ ಕೋರ್ಟಿನಲ್ಲಿ ಬ್ರಾಹ್ಮಣನು ಜಡ್ಜಿಯಾಗಿರುವನೆಂದು ಬೇರೆ ಜಡ್ಜಿಯನ್ನು ನೇಮಕಮಾಡುವಂತೆ ಸರ್ ಕೆ. ವಿ. ರೆಡ್ಡಿನಾಯ್ಡುರವರು ಹೈಕೋರ್ಟಿನಲ್ಲಿ ಕೇಳಿಕೊಳ್ಳಲು ಹೈಕೋರ್ಟು ಜಡ್ಜಿಯವರು ಅದು ನ್ಯಾಯಸಮ್ಮತವಲ್ಲವೆಂದು ತಿಳಿಸಿ ಅರ್ಜಿಯನ್ನು ವಜಾಮಾಡಿದರು

—ರಾಜಮಹೇಂದ್ರಿಯಿಂದ ಒಬ್ಬ ತುರುಕನ ಜೊತೆಯಲ್ಲಿ ಓಡಿಹೋಗಿದ್ದ ಒಬ್ಬ ಹಿಂದೂ ವಿಧವೆಯು ಮುಸಲ್ಮಾನ ಮತಕ್ಕೆ ಸೇರುವುದಾದರೆ ಮದುವೆಯಾಗಬಹುದೆಂದು ಮಹಮ್ಮದೀ ಪಂಚಾಯಿತರು ಹೇಳಲು ಅದರಂತೆ ಅವಳು ಮಹಮ್ಮದೀಮತವನ್ನೊಪ್ಪಿ ಮದುವೆಯಾದಳು.

—ಅಮೆರಿಕಾದ ಪೆನ್‌ಸಿಲ್ವೇನಿಯಾದಲ್ಲಿನ ೩೦೦ ಮೈಲಿಯ ಒಂದು ಸ್ಥಳದಲ್ಲಿ ಸುಮಾರು ೪೦೦೦೦ ಎಣ್ಣೆ ಭಾವಿಗಳಿವೆ.

—ಸಧ್ಯದಲ್ಲಿಯೇ ಜಿನೀವಾದಲ್ಲಿ ನಡೆಯುವ ವೈಜ್ಞಾನಿಕ ಸಮಿತಿಗೆ ಬರಬೇಕೆಂದು ಸರ್ ಜೆ. ಸಿ. ಬೋಸ್‌ರವರಿಗೆ ಲೀಗ್ ಆಫ್ ನೇಷನ್ಸಿನವರು ಸ್ವಾಗತವನ್ನಿತ್ತಿರುವರು.

—ಬೊಂಬಾಯಿನಲ್ಲಿನ ಒಂದು ಮಿಲ್ಲನ್ನು ೪೭ ಲಕ್ಷ ರೂಪಾಯಿಗೆ ಮದರಾಸಿನ ಜಯರಾಮಯ್ಯರ್ ಎಂಬುವನು ಕೊಂಡುಕೊಂಡನು. ಈತನು ಮದರಾಸಿನ ಸೆಂಟ್ರಲ್ ಬ್ಯಾಂಕಿಗೆ ೧೪೦೦೦ ರೂಪಾಯಿಗೆ ಮೋಸಮಾಡಿದನೆಂಬ ಅಪಾದನೆ ಮೇಲೆ ಬೊಂಬಾಯಿನಲ್ಲಿ ದಸ್ತಗಿರಿಮಾಡಲ್ಪಟ್ಟು ಜಾಮೀನಿನಮೇಲೆ ಬಿಡಲ್ಪಟ್ಟನು. ಮೊಕದ್ದಮೆಯು ಮದರಾಸಿಗೆ ವರ್ಗಮಾಡಲಾಗಿದೆ.

—ನೋಟುಗಳು ಬಹುಶಃ ನವಂಬರ್ ತಿಂಗಳಲ್ಲಿ ಪೇಪರ್ ಕರೆನ್ಸಿ ಕಚೇರಿಯವರು ಹೊಸದಾದ ಐದು ರೂಪಾಯಿನ ನೋಟುಗಳನ್ನು ಜಾರಿಗೆ ತರುತ್ತಾರೆ. ಈ ನೋಟುಗಳು ಇದುವರೆಗೆ ತಯಾರಾಗಿ ಇಡಲ್ಪಟ್ಟಿವೆ. ಇದು ತೆಳುವಾದ ರಂಗಿನಿಂದ ಮುದ್ರಿಸಲ್ಪಟ್ಟಿದೆ. ಈಗಿರತಕ್ಕ ಹತ್ತುರೂಪಾಯಿನ ನೋಟಿಗಿಂತ ಇದು ಸ್ವಲ್ಪ ಚಿಕ್ಕದಾಗಿರುತ್ತದೆ. ಇದುವರಿಗೆ ನೋಟಿನ ತೆಳುಬಾಗದಲ್ಲಿ ಸ್ಟೈಕ್ ಇತ್ತು, ಈಗಿನ ನೋಟುಗಳಲ್ಲಿ ಮಧ್ಯಭಾಗದಲ್ಲಿರುತ್ತದೆ. ನೋಟಿನ ಹಿಂದುಗಡೆಯಲ್ಲಿ ಕುಂಡ ತೆಳುವಾದ ರಂಗಿರುತ್ತದೆ. ನಂಬರುಗಳು ಹತ್ತಿರ ಹತ್ತಿರವಾಗಿ ಮುದ್ರಿಸಲ್ಪಟ್ಟಿರುತ್ತದೆ. (ಅ,ಬ,ಪ)

—ಜರ್ಮನಿಯವರು ನಿದ್ರಾರೋಗಕ್ಕೆ ಅಮೋಘವಾದ ಔಷಧವನ್ನು ಕಂಡುಹಿಡಿದಿರುತ್ತಾರೆ. ಇದರಹೆಸರು ಜರ್ಮಾನಿಕ್. ತೊಣಚಿಗಳು ಕಚ್ಚಿದ ಘಾಯಕ್ಕೂ ಇದು ಔಷಧವಾಗಿರುತ್ತೆ. ಇದು ಬೇಯರ್ ರಸಾಯನ ಕಾರ್ಖಾನೆಯಲ್ಲಿ ಕಂಡುಹಿಡಿಯಲ್ಪಟ್ಟಿರುತ್ತದೆಂದು ಡಾಕ್ಟರ್ ಫೂಸ್‌ಬರ್ಗ್‌ರವರು ತಿಳಿಸಿರುತ್ತಾರೆ.

—ಚಕ್ರವರ್ತಿಯವರಿಂದ ಈ ದೇಶದ ಜನರಿಗೆ ಆಗಿಂದಾಗ್ಗೆ ಕೊಡಲ್ಪಡುತ್ತಿರುವ ಬಿರುದುಗಳನ್ನು ಇನ್ನು ಮುಂದೆ ನಿಲ್ಲಿಸಬೇಕೆಂದು ಮಧ್ಯಪ್ರಾಂತ್ಯದ ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಒಂದು ಠರಾವನ್ನು ಅಲ್ಲಿಯ ದೇಶಾಭಿಮಾನಿಗಳೊಬ್ಬರು ತರುವವರಾಗಿರುತ್ತಾರೆ.

—ಒಬ್ಬ ಯುವಕನು ಗರ್ಭಾದಾನದ ದಿನ ಹೆಂಡತಿಗೆ ಪಾಷಾಣವನ್ನು ಹಾಕಿ ಕೊಂದ ಮೊಕದ್ದಮೆಯು ಬಂತು. ಈ ಯುವಕನು ಮದುವೆಯಾದನಂತರ ಹೆಂಡತಿಯು ದೊಡ್ಡವಳಾದಳು. ಆರು ತಿಂಗಳಾದಮೇಲೆ ಅವಳ ಪೋಷಕರಲ್ಲಿಗೆ ಬಂದು ಗರ್ಭಾದಾನವನ್ನು ಮಾಡಬೇಕೆಂದು ಹಟ ಹಿಡಿದರು. ಮೊದಲು ಅವರು ಒಪ್ಪಲಿಲ್ಲವಾದರೂ ಕೊನೆಗೆ ಒಪ್ಪಿದರು. ಇವರಿಬ್ಬರಿಗೆ ರಾತ್ರಿ ಊಟಮಾಡಿಸಿ ಹಾಸಿಗೆಗೆ ಕಳುಹಿಸಿದರು. ಅರ್ಧರಾತ್ರಿಯಲ್ಲಿ ಈ ಹೆಂಡತಿಯು ಎದ್ದು ಬಂದು ಗಂಡನು ಬೆಲ್ಲದ ಗಡ್ಡೆಯನ್ನು ಕೊಟ್ಟನೆಂದೂ ಆಗಿನಿಂದಲೂ ಮೈಯಲ್ಲಿ ಸರಿಯಿಲ್ಲವೆಂದೂ ಹೇಳಿದಳು. ಆಗಾಗಲೇ ಕಾಯಿಲೆಯು ಹೆಚ್ಚುತ್ತ ಬರಲು ಆಸ್ಪತ್ರೆಗೆ ಕರೆದುಕೊಂಡು ಹೋಗಲು ೫ನೇ ದಿನ ಅಲ್ಲಿ ಸತ್ತಳು. ಕರುಳನ್ನು ಪರೀಕ್ಷೆಗೆ ಕಳುಹಲು ಅದರಲ್ಲೆಲ್ಲಾ ಪಾಷಾಣವು ಕಂಡುಬಂದಿತು. ಗಂಡನು ಪಾಷಾಣವನ್ನು ಇಟ್ಟು ಕೊಂದನೆಂದು ಗೊತ್ತಾಯಿತು. ಅವನು ಮರುದಿನವೇ ಹೆಂಡತಿಯ ನಗಗಳನ್ನು ತೆಗೆದುಕೊಂಡುಹೋಗಲು ಬರಲೇ ಇಲ್ಲ. ಇವನನ್ನು ದಸ್ತಗಿರಿಮಾಡಿ ಯಾವಜ್ಜೀವ ಶಿಕ್ಷೆಯನ್ನು ವಿಧಿಸಿದರು. ಇದರಲ್ಲಿ ಹೀಗೆ ಮಾಡಲು ಉದ್ದೇಶವೇನೆಂದು ತಿಳಿಯುವುದಿಲ್ಲ. ವಿಷದಿಂದೊಡಗೂಡಿದ ಬೆಲ್ಲವನ್ನು ಮೊದಲೇ ಇಟ್ಟುಕೊಳ್ಳಲು ಏನೋ ಉದ್ದೇಶವಿರಬೇಕು.

—ಪ್ರಥಮ ಕರ್ನಾಟಕಾಯುರ್ವೇದ ಸಮ್ಮೇಳನದ ಪ್ರದರ್ಶನದಲ್ಲಿ ನಮ್ಮ ಸಂಸ್ಥಾನದ ಪ್ರಸಿದ್ಧ ಆಯುರ್ವೇದ ಪಂಡಿತರಾದ ನಂಜನಗೂಡಿನ ಬಿ. ವಿ. ಪಂಡಿತರಿಗೆ ಭಂಗಾರದ ಮೆಡಲ್ಲೂ ಪಾಳ್ಯದ ವೆಂಕಟಾಚಲಪಂಡಿತರಿಗೆ ಬೆಳ್ಳಿಯ ಮೆಡಲ್ಲೂ ಬಂದಿರುವುದನ್ನು ಕೇಳಿ ನಾವು ಸಂತೋಷಿಸುತ್ತೇವೆ.

—ನವನಗರದ ಜಾಮ್ ಸಾಹೇಬರು ಲಂಡನ್ನಿನಲ್ಲಿ ಒಂದು ನಾಟಕವನ್ನು ನೋಡಿಕೊಂಡು ಹೊರಗೆ ಬಂದು ತಮ್ಮ ಮೋಟಾರನ್ನು ಎದುರುನೋಡುತ್ತಿರುವಾಗ ಒಬ್ಬಾನೊಬ್ಬ ಇಂಗ್ಲೀಷ್ ಕಳ್ಳನು ಅವರ ಹಣದ ಚೀಲವನ್ನು ಹಾರಿಸಿಕೊಂಡು ಪರಾರಿಯಾದನಂತೆ.

—ಸೇಲಂನಲ್ಲಿ ರಸ್ತೆ ಸರಿಮಾಡುವ ರೋಲರನ್ನು ಎಳೆಯುತ್ತಿರುವಾಗ ೧೬ ವರ್ಷ ವಯಸ್ಸಿನ ಬಾಲೆಯು ಸಿಕ್ಕಿ ಅವಳಮೇಲೆ ರೋಲರ್ ಹರಿದು ಮೃತಹೊಂದಿದಳು.

—ಮತ್ತನ್ನುಂಟುಮಾಡುವ ಔಷಧ ಕೊಟ್ಟದ್ದಕ್ಕಾಗಿ ಒಬ್ಬ ಹೆಂಗಸು ಶಿಕ್ಷಿಸಲ್ಪಟ್ಟಳು. ಇವಳು ಯಾರಮನೆಗಾದರೂ ಹೋಗಿ ಕೆಲಸಕ್ಕೆ ಇರುವೆನೆಂದು ಒಪ್ಪಿಕೊಂ ಒಂದೆರಡು ದಿನವಿದ್ದು ಯಜಮಾನತಿಯನ್ನು ಹಸಿ ಂತಿರಸವನ್ನು ತೆಗೆದುಕೊಳ್ಳುವುದೊಳ್ಳೆಯದೆಂದು ಎಂ ಳು. ಆ ಮನೆಯ ಯಜಮಾನತಿಯು ಆ ಕೆಲಸದ ಹೆಂಗಸಿಗೆ ಹಸಿಹುಂತಿರಸವನ್ನು ತೆಗೆದುಕೊಡು ಎಂದು ಟ್ಟಳು. ಆ ರಸವನ್ನು ಮನೆಯಲ್ಲಿ ನಾಲ್ವರು ತೆಗೆದು ಂಡರು. ಸ್ವಲ್ಪಹೊತ್ತಿಗೆ ಎಲ್ಲರೂ ದೇಹತಿಳಿಯದೆ ಬಿದ್ದುಹೋದರು. ಆ ಅಡಿಗೆಯ ಹೆಂಗಸು ಅವರಲ್ಲಿದ್ದ ೧೫-೮-೦ ಯನ್ನು ತೆಗೆದುಕೊಂಡು ಎದ್ದು ಹೊರಟುಹೋದಳು. ಇನ್ನೊಂದುಕಡೆ ಇದೇ ಹೆಂಗಸು ರಾತ್ರಿ ಊಟಕ್ಕೆ ಅನ್ನವನ್ನೂ ಮೂಲಂಗಿಯ ಹುಳಿಯನ್ನೂ ಮಾಡಿ ಮನೆಯ ಯಜಮಾನನ ಊಟವಾದನಂತರ ಯಜಮಾನಿಯೊಡನೆ ಊಟಮಾಡುತ್ತ ಎಲ್ಲವನ್ನೂ ಊಟಮಾಡಿದಳು. ಆದರೆ ಹುಳಿಯನ್ನು ಮಾತ್ರ ತಾನು ಹಾಕಿಕೊಳ್ಳಲಿಲ್ಲ. ವಿಷವು ಏರುವ ಹೊತ್ತಿಗೆ ಸರಿಯಾಗಿ ಗಲಾಟೆಯಾಯಿತು. ನೆರೆಹೊರೆಯವರೆಲ್ಲರೂ ಸೇರಿ ಆ ಹೆಂಗಸನ್ನು ಹಿಡಿದರು. ಇವಳು ಈಗ ೫ ವರ್ಷ ಕಠಿಣ ಸಜ ಅನುಭವಿಸುತ್ತಿರುವಳು.

—ಕಾಂಗ್ರೆಸ್ ನಿರ್ವಾಹಕ ವರ್ಗಸಭೆಗಳ ಸಭ್ಯರೆಲ್ಲರೂ ಖದ್ದರ್ ಅನ್ನೇ ಧರಿಸಬೇಕೆಂಬ ನಿಯಮವು, ದೇಶೀಯ ಮಹಾಸಭಾಕಾರ್ಯನಿರ್ವಾಹಕ ವರ್ಗದವರೆಲ್ಲರೂ ಕಲ್ಕತ್ತಾ ಸಭೆಯಲ್ಲಿ ಖದ್ದರನ್ನು ಧರಿಸದೆ ಮೇಲ್ಕಂಡ ಸಭೆಗಳಿಗೆ ಯಾರೂ ಪ್ರವೇಶಿಸಕೂಡದೆಂದು ವಿ. ಜೆ. ಪಟೇಲ್ ರವರು ಇಂಡಿಯನ್ ಡೇಲಿಮೇಲ್ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ.

—ಗುಂತೀ ನದಿಯಲ್ಲಿ ನಾವೆಗಳು ಮುಣುಗಿಹೋದದ್ದು ಎರಡು ನಾವೆಗಳು ಗುಮ್ತಿ ನದಿಯಲ್ಲಿ ಮುಣುಗಿಹೋದವೆಂದು ಸೀತಾಪುರದಿಂದ ವರ್ತಮಾನ ಬಂದಿರುತ್ತೆ. ೪೦ ಮಂದಿ ಮೃತಪಟ್ಟರೆಂಬುದಾಗಿ ತಿಳಿದುಬಂದಿರುತ್ತೆ.

—ಅಲಹಾಬಾದಿನ ವಿಶ್ವವಿದ್ಯಾಲಯದ ಬಿ. ಎ. ಮುಂತಾದ ತರಗತಿಗಳಲ್ಲಿ ವಿದ್ಯಾರ್ಥಿಗಳೊಡನೆ ವಿದ್ಯಾರ್ಥಿನಿಯರನ್ನು ಓದಲು ಅವಕಾಶಕೊಡಬಾರದೆಂದು ತೀರ್ಮಾನಿಸಿರುವರು.

—ಇತರ ದೇಶಗಳಿಂದ ಇಂಡಿಯಾದೇಶಕ್ಕೆ ಕಳೆದ ವರ್ಷ ೧೧೬೦೦ ಟನ್ ಪ್ರಿಂಟಿಂಗ್ ಕಾಗದವೂ ೮೦೦೦ ಟನ್ ಬರೆಯುವಕಾಗದವೂ ೩೦೦ ಟನ್ ಇತರ ವಿಧವಾದ ಕಾಗದಗಳೂ ೧೦೦೦ ಟನ್ ಸರ್ಕಾರಿ ಕಾಗದವೂ ಬಂದಿರುತ್ತವೆ.

—ಸೇಲಂ ಮುನಿಸಿಪಲ್ ಸ್ಕೂಲು ವಿದ್ಯಾರ್ಥಿಯೊಬ್ಬನಾದ ಕಾಲಿ ಎಂಬ ಆದಿದ್ರಾವಿಡನು ಪರೀಕ್ಷೆಯಲ್ಲಿ ತೇರ್ಗಡೆಯಾಗುವಂತೆ ಮಾಡಲು ತನ್ನ ಉಪಾಧ್ಯಾಯನ ಚಿಕ್ಕಮನೆಯ ಬೀಗವನ್ನು ಕಳ್ಳಬೀಗದಕೈಯಿಂದ ತೆಗೆದು ಸಂಬಂಧಪಟ್ಟ ಕಾಗದ ಮತ್ತು ರಿಜಿಸ್ಟರುಗಳಲ್ಲಿ ತಿದ್ದಿದ್ದಕ್ಕಾಗಿ ಸ್ಕೂಲಿನಿಂದ ವಜಾಮಾಡಲ್ಪಟ್ಟನಲ್ಲದೆ ಪೋಲೀಸು ವಿಚಾರಣೆಗೂ ಕಾರಣವಾಗಿದೆ.

—ಅಲಿಪೂರ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪ್ರತಾಪಚಂದ್ರ ಗುಹ ರಾಯ್ ಎಂಬುವರಿಗೆ ೨ ವರ್ಷ ಕಠಿಣ ಸಜವನ್ನೂ ೧೦೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದ್ದು ಈ ಹಿಂದೆಯೇ ತಿಳಿಸಿರುತ್ತೇವೆ. ಈಚೆಗೆ ಇವರು ಹೈಕೋರ್ಟಿನಲ್ಲಿ ಅಪೀಲು ಮಾಡಿದ್ದರು. ಅಲ್ಲಿ ಮೊಕದ್ದಮೆಯು ಅಲ್ಲಿ ವಿಚಾರಣೆಯಾಗಿ ಜಡ್ಜಿಯವರು ಕೆಳಗಿನ ಕೋರ್ಟಿನ ಶಿಕ್ಷೆಯನ್ನು ಖಾಯಂಮಾಡುವಲ್ಲಿ ಸಜಾಶಿಕ್ಷೆಯನ್ನು ೬ ತಿಂಗಳಿಗೆ ಇಳಿಸಿರುವರು.

—ಅಮೃತಸರದ ಮೋರಿಗಂಜ್ ಬಜಾರಿನಲ್ಲಿ ಸಿಕ್ಕಿದ ಒಂದು ಗೋಣೀಚೀಲದಲ್ಲಿ ತಲೆ ತೋಳು ಕಾಲುಗಳಿಲ್ಲದ ಒಂದು ದೇಹವಿತ್ತು. ಪೋಲೀಸು ತನಿಖೆ ಇನ್ನು ಷುರು!

—ಮುಂದಿನ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನಕ್ಕೆ ತನ್ನನ್ನು ನೇಮಿಸಲಾಗದೆಂದೂ, ಏಕೆಂದರೆ ತಾವು ಬರಲಾಗುವುದಿಲ್ಲವೆಂದೂ ಬಂದರೂ ಅಧ್ಯಕ್ಷಸ್ಥಾನಕ್ಕೆ ಸಮಯೋಚಿತ ಕಾರ್ಯಮಾಡಲು ತಮ್ಮಿಂದಾಗುವುದಿಲ್ಲವೆಂದೂ ಶ್ರೀಯುತ ಅರವಿಂದ ಘೋಷರವರು ಕಾನ್ಪುರದ ಕಾಂಗ್ರೆಸ್ಸು ರಿಸೆಪ್ಷನ್ ಕಮಿಟಿಗೆ ತಿಳಿಯಪಡಿಸಿರುವರು.

—ಕುಂದಾಪುರದ ಇಬ್ಬರು ರೆಡ್ಡಿಯರು ಸರ್ಕಾರದ ಹುಕುಂ ಪಡೆಯದೆ ಲಾಟರಿ ನಡೆಸಲು ಏರ್ಪಾಡುಮಾಡಮಾಡುತ್ತಿದ್ದಕ್ಕಾಗಿ ಪೋಲೀಸಿನವರು ಅವರಮೇಲೆ ಕ್ರಮನಡೆಸಿ ಮಾಜಿಸ್ಟ್ರೇಟರು ಅಪರಾಧಿಗಳಿಗೆ ೮೦೦ ರೂಪಾಯಿ ಜುಲ್ಮಾನೆ ವಿಧಿಸಿದರು.

—ಕಳವು ಮುಂತಾದ ಅನೇಕ ತಕ್ಸೀರಿಗಾಗಿ ಇಡಲ್ಪಟ್ಟಿದ್ದ ಬೆಂಗಳೂರಿನ ಹರಿಚನ್ನಯ್ಯನೆಂಬ ಲಿಂಗಾಯಿತನು ತನ್ನನ್ನಿಟ್ಟಿದ್ದ ಬೆಜವಾಡ ಪೋಲೀಸು ಸ್ಟೇಷನ್ನಿಲ್ಲಿ ಬಟ್ಟೆಯನ್ನು ಕತ್ತಿಗೆ ಬಿಗಿದುಕೊಂಡು ಆತ್ಮಹತ್ಯ ಮಾಡಿಕೊಂಡನು.

—ತಂಜಾವೂರು ಜಿಲ್ಲೆಗೆ ಸೇರಿದ ಸೆಂಗಿಪಟ್ಟಿ ಎಂಬಊರಿಗೆ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ರವರು ಹೋದಾಗ ಅಲ್ಲಿನ ಸ್ಕೂಲು ಬಾಲಕಿಯರು ಒಳ್ಳೆ ಬಟ್ಟೆಬರೆಗಳನ್ನೂ ಆಭರಣವನ್ನೂ ಧರಿಸಿಕೊಂಡು ಬಂದಿದ್ದರು. 7 ವರ್ಷದ ಒಬ್ಬ ಹುಡುಗಿಯು ತುಂಬಾ ಒಡವೆಧರಿಸಿ ಬಂದಿದ್ದು ವಾಪಸ್ಸು ಮನೆಗೆ ಬರುತ್ತಿದ್ದಾಗ ದಾರಿಯಲ್ಲಿ ಒಬ್ಬ ದುಷ್ಟಳಾದ ಹೆಂಗಸು ಆ ಹುಡುಗಿಯನ್ನು ಕೊಂದು ಆಭರಣಗಳನ್ನು ಅಪಹರಿಸಿಕೊಂಡು ಓಡಿಹೋಗುತ್ತಿದ್ದಳು. ದಸ್ತಗಿರಿ ಮಾಡಲ್ಪಟ್ಟು ವಿಚಾರಣೆಗೆ ಒಳಪಟ್ಟಿರುತ್ತಾಳೆ.

—ಕಳೆದ ೧೨ ನೇ ತಾರೀಖಿನ ದಿವಸ ಮೈಸೂರು ಮ್ಯುನಿಸಿಪಲ್ ಮೀಟಿಂಗು ಕೇವಲ ಕಂದಾಯ ರಿವೈಸುಮಾಡತಕ್ಕ ವಿಷಯದಲ್ಲಿ ಚರ್ಚಾಸ್ಪದವಾಗಿದ್ದುದರಿಂದ ಮೀಟಿಂಗು ಅತಿ ಉತ್ಸಾಹಕರದಿಂದ ನಡೆಯಿತು. ರಿವೈಸು ಮಾಡಲು ಜನಸಮ್ಮತಿ ಆವಶ್ಯಕವೆಂದೂ ಈ ಸಾರಿ ಮೀಟಿಂಗಿನಲ್ಲಿ ಕೂಡ ತರದೆ ಹೆಚ್ಚಿಸುತ್ತಿರುವುದು ಕೇವಲ ಜನಾನುಕೂಲವೂ ಕಾನೂನಿಗೆ ವಿರುದ್ಧವಾಗಿಯೂ ಇರುವುದೆಂದೂ ಈಗ ಮನೆ ಬಾಡಿಗೆಯು ಮೊದಲಿಗಿಂತ ಕಡಿಮೆಯಾಗಿರುವುದೆಂದೂ ಹೆಚ್ಚಿಸಿರುವ ಕಂದಾಯವು ಆಯಾಮನೆಗಳಿಗನುಗುಣವಾಗಿರುವುದಿಲ್ಲವೆಂತಲೂ ಈಗ ಮಾಡಿರುವ ಕಂದಾಯವನ್ನು ತೆಗೆದುಹಾಕಬೇಕೆಂತಲೂ ಲಾಯರುಗಳಾದ ಮೆ|| ರಾಮಕೃಷ್ಣಯ್ಯ ಸಿ. ನರಸಿಂಹಯ್ಯ ಎ. ಕೃಷ್ಣರಾವ್ ರವರು ಬಹಳ ಮೆಹನತ್ತಿನಿಂದ ವಾದಿಸಿದರು.

ಪ್ರೆಸಿಡೆಂಟರು ಅಲ್ಲಲ್ಲೇ ಸ್ವಲ್ಪ ಸಮಾಧಾನಕರವಾದ ಮಾತುಗಳನ್ನಾಡಿದರು. ಇಷ್ಟಾಗುವಹೊತ್ತಿಗೆ ರಾತ್ರಿ ೮|| ಗಂಟೆಯಾದುದರಿಂದ ಮೆ|| ಮುನಿವೆಂಕಟಪ್ಪನವರು ಮೀಟಿಂಗನ್ನು ಅಡ್ಜರ್ನ್ ಮಾಡಲು ಕೇಳಿಕೊಂಡದ್ದರಿಂದ ಅನೇಕರು ಸಮ್ಮತಿಸಿ ಸೋಮವಾರಕ್ಕೆ ಮುಂದರಿಸಲ್ಪಟ್ಟಿದೆ

—ಗೋತನ್‌ಬರ್ಗಿನ ಆರ್ನಿಬೇರ್ಗ್ ಎಂಬಾತನು ೪೦೦ ಗಜಗಳನ್ನು ೪ ನಿಮಿಷ ೩೬ ಸೆಕೆಂಡಿನಲ್ಲಿಯೂ, ೧ ಮೈಲಿಯನ್ನು ೨೧ ನಿಮಿಷ ೧ ಸೆಕೆಂಡಿನಲ್ಲಿಯೂ ಈಜಿ ಪ್ರಪಂಚದಲ್ಲೆಲ್ಲಾ ಈಜುವುದರಲ್ಲಿ ಪ್ರಥಮನಾಗಿರುತ್ತಾನೆ.

—ಪ್ರಪಂಚದ ಪ್ರಖ್ಯಾತ ವಜ್ರವ್ಯಾಪಾರ ಕಂಪೆನಿಗಳು ಒಟ್ಟಾಗಿ ಸೇರಿ ಒಂದೇ ಕಂಪೆನಿಯಾಗಿ ಲಂಡನ್ನಿನಲ್ಲಿ ಸ್ಥಾಪಿಸಲು ಏರ್ಪಾಡುಮಾಡಿರುವರು

—ಮೈಸೂರು ಸಬ್‌ಜಡ್ಜಿಯವರಾದ ಮ|| ಕೃಷ್ಣಮಾಚಾರ್ಯರು ೬ ವಾರ ರಜಾಪಡೆದಿರುವರು. ಅವರು ರಜಾ ಉಪಯೋಗಿಸಿಕೊಂಡಾಗ ಅವರ ಸ್ಥಾನಕ್ಕೆ ತುಂಕೂರಿನ ಮ|| ಲಕ್ಷ್ಮೀನರಸಿಂಹಯ್ಯಂಗಾರ್ಯರು ಬರುತ್ತಾರಾಗಿಯೂ ಪ್ರಕಟಿತವಾಗಿದೆ.

Mysore Government Advertisements.

ಹರಾಜ್ ಇಸ್ತಿಹಾರ್

11-8

ತಾ|| ೨೦ ನೇ ಜುಲೈ ೧೯೨೫

ವ್ಯವಸಾಯಗಾರರಿಗೂ ಮತ್ತು ದನಕರುಗಳನ್ನು ಸಾಕತಕ್ಕ ರೈತರುಗಳಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಖುಷ್ ಖರೀದಿಗೆ ಹತ್ತು ವರ್ಷದ ವಯಸ್ಸಿಗೆ ಮೇಲ್ಪಟ್ಟ ಅನೇಕ ಹೆಣ್ಣು ರಾಸುಗಳು ಸಿದ್ಧವಾಗಿವೆ.

ಸಾಲುವಾರು ರಾಸುಗಳು	ಖರೀದಿ ಒಳ್ಳೇರಾಸುಗಳಿಗೆ	ಇತರ ರಾಸುಗಳಿಗೆ
1914	ರೂ 25	ರೂ 15
1913	20	10
1912	15	10
1911 ಮತ್ತು 1910	12	10
1909 ಮತ್ತು ಮೇಲೆ	10	5

ವಿ. ಸೂ—ಈಪೈಕಿ ಬಹಳ ಚೆನ್ನಾಗಿರತಕ್ಕ ರಾಸುಗಳಿಗೆ ಶೇಕಡ ೫೦ ರಂತೆ ಬೆಲೆ ಜಾಸ್ತಿ ಮೊಕರೂರ್ ಮಾಡಿರುತ್ತೆ.

ಆರು ತಿಂಗಳು ವಯಸ್ಸಿನ ಒಳಗಿರತಕ್ಕ ಕರುಗಳನ್ನು ಅವುಗಳ ತಾಯಿ ಸಮೇತ ಮಾರಲ್ಪಡುತ್ತೆ. ಇಂಥಾ ಕರುಗಳಿಗೆ ಈ ಕೆಳಗೆ ಕಂಡಂತೆ ಅಲಾಯಿದ ಬೆಲೆ ಮೊಕರೂರ್ ಮಾಡಿರುತ್ತೆ.

1 ಗಂಡು ಕರುಗಳು ರೂ ೨೫ ರಿಂದ ೪೦ ರವರೆಗೆ
2 ಹೆಣ್ಣು ಕರುಗಳು ೧೦ ೩೦
ಬೆಲೆ ಅವುಗಳ ಕಂಡೀಷನ್ ಮೇಲೆ ಇರುತ್ತೆ

೨ ವ್ಯವಸಾಯಗಾರರೂ ಮತ್ತು ದನಗಳನ್ನು ಸಾಕತಕ್ಕ ರೈತರೂ ಸಹ ಮೇಲ್ಕಂಡಂತೆ ೨೦ ಹಸುಗಳನ್ನು ಕೊಂಡು ಕೊಂಡಲ್ಲಿ, ಅಂಥವರುಗಳಿಗೆ ರಿಯಾಯಿತಿದರದಲ್ಲಿ ಮೂರು ವರ್ಷ ವಯಸ್ಸಿನ ಒಂದು ಬೀಜದ ಹೋರಿಯನ್ನು ಸಹ ೧೦೦ ರೂಪಾಯಿ ಕುಷ್ ಖರೀದಿಗೆ ಕೊಡಲಾಗುತ್ತೆ

೩ ಮೇಲ್ಕಂಡ ರೈತರೂ ಮತ್ತು ವ್ಯವಸಾಯಗಾರರೂ ಸಹ ಒಂದೇ ಲಾಟಿನಲ್ಲಿ ೧೯೦೯ ನೇ ಸಾಲು ಮತ್ತು ಅದಕ್ಕೆ ಹೆಚ್ಚು ವಯಸ್ಸುಳ್ಳ ೨೦ ಹೆಣ್ಣು ರಾಸುಗಳನ್ನು ಕೊಂಡುಕೊಂಡಲ್ಲಿ ಅಂಥವರುಗಳಿಗೆ ರಾಸು ಒಂದಕ್ಕೆ ೫ ರೂಪಾಯಿ ಬೆಲೆ ಮೇರೆ ಕೊಡಲಾಗುತ್ತೆ.

೪ ಒಂದೂವರೆ ವರ್ಷ ವಯಸ್ಸುಳ್ಳ ಗಂಡುಕರುಗಳು ಒಂಟಿಯಾಗಿಯೇ ಆಗಲಿ ಜೊತೆಯಾಗಿಯೇ ಆಗಲಿ ಮತ್ತು ಒಂದು ಲಾಟೇ ಆಗಲಿ ಖುಷ್ ಖರೀದಿಗೂ ಮತ್ತು ಹರಾಜಿಗೂ ಸಹ ಸಿದ್ಧವಾಗಿವೆ. ಮೇಲ್ಕಂಡ ಕರುಗಳನ್ನು ದರಖಾಸ್ತಿನ ಮೇಲೆ ಕೊಂಡು ಕೊಳ್ಳಲು ಅಪೇಕ್ಷೆಯುಳ್ಳವರು ಅಮೃತಮಹಲ್ ಇಲಾಖಾ ಸೂಪರಿಂಟೆಂಡೆಂಟರಿಗೆ ತಮ್ಮ ದರಖಾಸ್ತುಗಳನ್ನು ಗುಜರಾಯಿಸಿಕೊಳ್ಳಬಹುದಾಗಿರುತ್ತೆ.

೫ ಪೂರಾ ಮೊಬಲಗು ದರಖಾಸ್ತು ಮಂಜೂರಾದ ಕೂಡ್ಲೆ ಕಟ್ಟಿ ರಾಸುಗಳ ಸುಪರ್ದಿಗೆ ತೆಗೆದುಕೊಳ್ಳಬೇಕು

೬ ಯಾವ ಕಾಲದಲ್ಲಿ ಬೇಕಾದರೂ ರಾಸುಗಳನ್ನು ಖುಷ್ ಖರೀದಿಗೆ ದರಖಾಸ್ತಿನ ಮೇಲೆ ಪಡೆಯಬಹುದು. ಈ ಬಗ್ಗೆ ಮೈಸೂರಿನಲ್ಲಿರುವ ಅಮೃತಮಹಲ್ ಇಲಾಖಾ ಸೂಪರಿಂಟೆಂಡೆಂಟರವರಿಗೇ ಆಗಲಿ ಅಥವ ನಿಮಗೆ ಸಮೀಪದಲ್ಲಿರುವ ಅಮೃತಮಹಲ್ ದರೋಗರವರಿಗೆ ಆಗಲೀ ಅರ್ಜಿ ಗುಜರಾಯಿಸಿಕೊಳ್ಳಬಹುದು.

೭ ಬಾಕಿ ಹೆಚ್ಚು ಸಂಗತಿಯನ್ನು ದರೋಗರಿಂದ ತಿಳಿಯಬಹುದು.

ಎಂ. ಅಬ್ದುಲ್ಲಾ ಷರೀಫ್
ಸೂಪರಿಂಟೆಂಡೆಂಟ್
ಅಮೃತಮಹಲ್ ಇಲಾಖಾ

To Popularise your Business in the Karnataka Provinces

YOU MUST ADVERTISE IN

the "SATYAVADI"

It is the cheapest and mostup-to-date Karnatic Weekly

It is read largely and widely

Itis circulated among all grades of persons

It offers a profitable medium for advertising

Advertisement in this Paper is a good investment

Registered for Government Advertisements

Your Advertisement is Solicited

FOR RATES ETC., APPLY TO
The SATYAVADI Office,
Mysore, S. India.

ಹನುಮಾನ್ ಉಪಾಸಕರ

ಆಶ್ಚರ್ಯಕರವಾದ ಭವಿಷ್ಯದ್ವಾಕ್ಯಗಳು

ಚನಾಯಿಸಿ ನಿಮ್ಮ ಪ್ರಶ್ನೆಗಳನ್ನು ಚೆನ್ನಾಗಿ ಭದ್ರಪಡಿಸಿ ಮೊಹರುಮಾಡಿದ ಕವರಿನಲ್ಲಿ ಇಟ್ಟು ಕಳುಹಿಸಿ ಆ ಪ್ರಶ್ನೆಗಳಿಗೆ ತಕ್ಕ ಉತ್ತರಗಳೂ ಮತ್ತು ಬಿಚ್ಚಲ್ಪಡದೆ ಇರುವ ನಿಮ್ಮ ಕವರೂ ಕಳುಹಿಸಲ್ಪಡುವುದು. ಸರಿಯಾದ ನಿಮ್ಮ ಜನನಕಾಲವನ್ನೂ ಮತ್ತು ದಿನವನ್ನೂ ಅಥವ ಕಾಗದ ಬರೆಯುವ ಕಾಲವನ್ನೂ ಬರದು ಕಳುಹಿಸಿ. ಕಳ್ಳತನ ಮತ್ತು ಸರ್ಕಾರಿ ಸಂಬಂಧವಾದ ಪ್ರಶ್ನೆಗಳಿಗೆ ಗಮನ ಕೊಡುವುದಿಲ್ಲ. ಪರೀಕ್ಷಾರ್ಥವಾದ ಪ್ರಶ್ನೆಗಳಿಗೆ ಉತ್ತರ ಕೊಡಲಾಗುವುದಿಲ್ಲ. ಗ್ರಹಗಳ ದುಶ್ಚೇಷ್ಟೆಗಳನ್ನು ಶಾಸ್ತ್ರೀಯವಾದ ಶಾಂತಿ, ಹೋಮ, ಜಪ ಮತ್ತು ಕವಚ ಇವುಗಳ ಮೂಲಕ ಪರಿಹಾರಮಾಡುವ ಕ್ರಮವನ್ನು ತಿಳಿಸುತ್ತೇವೆ. 30-7

ದರಗಳು—೫ ಪ್ರಶ್ನೆಗಳಿಗೆ ೧ ರೂಪಾಯಿ. ೫ ರ ಮೇಲೆ ಪ್ರತಿ ಪ್ರಶ್ನೆಗೂ ೮ ಅಣೆ. ೧ ವರ್ಷದ ಜನ್ಮಫಲಗಳನ್ನು ಶೋಧಿಸಿ ಬರೆದು ತಿಳಿಸುವದಕ್ಕೆ ೫ ರೂ. ಬೆಳ್ಳಿ ಹನುಮಾನ್ ಕವಚ ೧ ಕ್ಕೆ ರೂ ೩—೮—೦ (ಬೇರೆ ದೇಶಗಳಿಗೆ ಅದಕ್ಕೆ ದ್ವಿಗುಣ) ವಿ.ಪಿ. ಚಾರ್ಜು ಹೆಚ್ಚು ಕೊಡಬೇಕು.

— ಅಭಿಪ್ರಾಯಗಳು —

ವಿ. ಪಿ. ಮೂಲ್ಯ ಒಂದು ಹನುಮಂತ ಕವಚವನ್ನು ದಯವಿಟ್ಟು ಕಳುಹಿಸಿ. ನನ್ನ ೫ ಪ್ರಶ್ನೆಗಳಿಗೆ ತಾವು ಕೊಟ್ಟ ಉತ್ತರಗಳಿಂದ ನಾನು ತೃಪ್ತಿಪಟ್ಟಿರುವೆನು. ಮತ್ತು ಸ್ವಪ್ನದಲ್ಲಿಯೂ ಹನುಮಂತ ದೇವರನ್ನು ನೆನ್ನೆ ರಾತ್ರಿ ಕಂಡೆನು. ಥಾನೇಶ್ವರ ವಾಜೀರಾಮ್
ಜಗ್ಗೀವನ್ ದಯಾಲ್ ಬಂಗಲೆ, ಘಾಟ್ ಕೂಪರ್,

ನಿಮ್ಮ ನಂ. ೧೧೫೨ ತಾ|| ೧೭-೧-೨೩ ರ ಕಾಗದದಲ್ಲಿ ಸೂಚಿಸಿದ್ದಂತೆ ಮಾರ್ಕಾಪುರದಿಂದ ಕೊಯಿಲ್ ಕುಂಡಕ್ಕೆ ನನಗೆ ವರ್ಗವಾಯಿತು. ನನಗೆ ಒಂದು ಹನುಮಂತ ಕವಚವನ್ನು ದಯವಿಟ್ಟು ವಿ. ಪಿ. ಮೂಲ್ಯ ಕಳುಹಿಸಿಕೊಡಿ. ಸಿ. ದೊರಸಾಮಿನಾಯಿಡು
೫-೨-೨೩ ಪೋಲೀಸ್ ಸರ್ಕಲ್ ಇನ್ಸ್ಪೆಕ್ಟರ್
ಕೊಯಿಲ್ ಕುಂಡ, ಕರ್ನೂಲ್ ಡಿಸ್ಟ್ರಿಕ್ಟ್

ಪತ್ರವ್ಯವಹಾರ ಇಂಗ್ಲೀಷಿನಲ್ಲಿಯೇ ಇರಬೇಕು.

Proprietor **Malayala Mantrashala**
VILLAPURAM Post. (S. I, Ry)

THE
MYSORE PRESS
RAMAVILAS ROAD
MYSORE

We undertake to print

JOBS — BOOKS & PERIODICALS.

Neat Workmanship
Moderate Charges
Prompt Execution

Colour & artistic work a speciality

Trial order solicited

B. S. MURTHY, B. A
Proprietor.

ಮೈಸೂರ್ ಪ್ರೆಸ್

ರಾಮವಿಳಾಸ ಅಗ್ರಹಾರ

ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಚಿಕ್ಕ ಪುಟ್ಟ ಮುದ್ರಣ
ಕಾರ್ಯವೂ, ಪುಸ್ತಕಗಳೂ, ಮಾಸಪತ್ರಿಕೆಗಳೂ
ಸಕಾಲಕ್ಕೆ ಸುಲಭ ದರದಿಂದ
ಮಾಡಲ್ಪಡುತ್ತೆ.

☞ ದಯವಿಟ್ಟು ಗಮನಿಸಿ:—

ನಮ್ಮ ಮುದ್ರಣವು ಬಹು ಅಂದ!
ನಮ್ಮ ಅಕ್ಷರವು ಬಲು ಛಂದ!!
ನಮ್ಮ ಕೆಲಸ ನೋಡುವವರಿಗೆ
ನೇತ್ರಾನಂದ!!!

ಬಿ. ಎಸ್. ಮೂರ್ತಿ, ಬಿ. ಎ.
ಪ್ರೊಪ್ರೈಟರ್.

Printed and Published by B.S.Murthy, B.A. at the Mysore Press, Mysore, for the Editor and Proprietor.